ಹೇಳಿದಾಗ ಕಪಾಳಕ್ಕೆ ಬಾರಿಸಿದಂತಾಗಿತ್ತು.

ತನ್ನಲ್ಲೀಗ ಕೋಟಿಗಟ್ಟಲೇ ಹಣವಿತ್ತು. ಸಮಾಜದಲ್ಲಿ ಉನ್ನತ ಸ್ಥಾನವಿತ್ತು. ಹಲವಾರು ಪ್ರತಿಷ್ಠಿತ ಕ್ಲಬ್‌ಗಳ ಸದಸ್ಯತ್ವವಿತ್ತು.

ಆದರೆ... ತನ್ನ ಮಡಿಲು ಯಾಕೋ ಮತ್ತೆ ತುಂಬಲೇ ಇಲ್ಲ.

ಕೆಲಸಗಳ ಒತ್ತಡದಿಂದ ಮುಂದೂಡುತ್ತ ಹೋದ ತಾಯ್ತನ, ಕಡೆಗೆ ತನ್ನನ್ನು ತಿರಸ್ಕರಿಸಿತ್ತು.

ವಿಕ್ರಂ ಸೇನ್‌ಗೆ ನಿರಾಶೆಯಾಗಿತ್ತು. ಅವನು ತನ್ನಿಂದ ವಿಚ್ಛೇದನ ಪಡೆದು ಬೇರೆ ಮದುವೆಯಾಗಿದ್ದ. ತನಗಾಗಿ ಕೋಟಿಗಟ್ಟಲೆ ಆಸ್ತಿ ಬಿಟ್ಟುಕೊಟ್ಟಿದ್ದ.

ಯಾಕೋ ಅಮೆರಿಕಾದಲ್ಲಿರಲು ಮನಸಾಗದೇ... ಬೆಂಗಳೂರಿಗೆ ಮರಳಿದ್ದಾಗಿತ್ತು. ದೊಡ್ಡ ಫ್ಲ್ಯಾಟನ್ನು ಖರೀದಿಸಿ, ವಾಸ್ತವ್ಯ ಹೂಡಿದ್ದಾಗಿತ್ತು. ಆಗ ಎಡಬಿಡದೆ ಕಾಡುವ ಒಂಟಿತನ ಮಗಳನ್ನು ಬಯಸಿತ್ತು.

ಪುರುಷೋತ್ತಮನೂ ಮರು ಮದುವೆಯಾಗಿದ್ದ. ಅವನಿಗೆ ಇನ್ನೊಬ್ಬ ಮಗನೂ ಹುಟ್ಟಿದ್ದ. ಸಂಸಾರದಲ್ಲಿ ನೆಮ್ಮದಿಯಾಗಿದ್ದ.

ಮಗಳನ್ನು ತನಗೆ ಬಿಟ್ಟುಕೊಡುವಂತೆ, ಅದಕ್ಕೆ ಬದಲಾಗಿ ಅವನು ಕೇಳಿದಷ್ಟು ಹಣ ಕೊಡುವುದಾಗಿ ಹೇಳಿದ ತನ್ನ ಮನವಿಯನ್ನು ಆತ ತಿರಸ್ಕರಿಸಿದ್ದ.

ಹಾಗಾಗಿಯೇ ನ್ಯಾಯಾಲಯದ ಮೂಲಕ ತನ್ನ ಮಗಳನ್ನು ಪಡೆಯಲು ಕೇಸು ಹಾಕಿದ್ದು, ಖ್ಯಾತ ನ್ಯಾಯವಾದಿ ಊರ್ಮಿಳಾ ದೇವಿಯೇ ಕೇಸು ಹಿಡಿದಿದ್ದರು. ಎರಡು ವರ್ಷಗಳ ಹೋರಾಟದ ನಂತರ ತನ್ನ ಪರವಾಗಿ ತೀರ್ಪು ಹೊರ ಬೀಳಲಿದೆ.

ತಾನು ಗೆದ್ದುಬಿಡುತ್ತೇನೆ. ತನ್ನ ತಾಯ್ತನದ ಹಕ್ಕು ಪಡೆದುಕೊಳ್ಳುತ್ತೇನೆ. ಆಹ್! ಎಂಥ ಸುಖದ ಭಾವ!...

'ಎಕ್ಸ್‌ಕ್ಯೂಸ್‌ಮಿ... ಇದು ಅಡ್ವೋಕೇಟ್ ಊರ್ಮಿಳಾ ದೇವಿಯವರ ಆಫೀಸು ತಾನೇ...' ಎಳಸು ದನಿಯೊಂದು ಬಾಗಿಲಾಚೆಯಿಂದ ಕೇಳಿದಾಗ ವನಿತಾ ತನ್ನ ಆಲೋಚನೆಗಳಿಂದ ಹೊರ ಬಂದು ಕತ್ತು ಹೊರಳಿಸಿದಳು.

ಬಾಗಿಲಾಚೆ ಅಳುಕುತ್ತ ನಿಂತಿದ್ದ 14–15ರ ಕಿಶೋರಿ. ಕಡು ನೀಲಿ ಜೀನ್ಸ್ ಪ್ಯಾಂಟು, ಕಿತ್ತಲೆ ಬಣ್ಣದ ಟಿ ಶರ್ಟ್, ಬಾಬ್ ಮಾಡಿದ ಕೂದಲು ಬೆನ್ನ ಮೇಲೊಂದು ಬ್ಯಾಗು. ಆಗಷ್ಟೇ ಬಿರಿಯ ತೊಡಗಿದ ಗುಲಾಬಿ ಮೊಗ್ಗಿನಂಥ ಮುಗ್ಧ ಚೆಲುವು 'ಯಾ... ಕಮಿನ್...' ಒಳಗೆ ಕರೆದಳು.

ಕಸಿವಿಸಿಯಿಂದಲೆ ಒಳಗೆ ಕಾಲಿಟ್ಟು ಇವಳ ಪಕ್ಕದ ಸೀಟಿನಲ್ಲಿಯೇ ಮುದುರಿ ಕೂರುತ್ತ 'ಮೇಡಂ... ಇದಾರಾ...' ಅಂತ ಕೇಳಿದಳು.

'ಬರ್ತಾರೆ... ಐಯ್ಯಾಂ ಆಲ್ಸೋ ವೇಟಿಂಗ್...' ಎಂದು ಮುಗುಳ್ನಗುತ್ತ, 'ಕಾಫಿ ಕುಡೀತೀಯಾ... ಯಾಕಿಷ್ಟು ನರ್ವಸ್ ಆಗಿದೀಯಾ...' ಕೇಳುತ್ತಲೇ ತಾನೇ ಎದ್ದು ಫ್ಲಾಸ್ಕಿನಿಂದ ಕಾಫಿ ಬಗ್ಗಿಸಿ ಕೊಟ್ಟಳು.

ಅಸ್ಥಿರವಾದ ಕೈಗಳಿಂದಲೇ ಕಾಫಿ ಕಪ್ಪು ಹಿಡಿದು ಚೂರು ಚೂರೇ ಗುಟುಕರಿಸುವಾಗ ಅವಳ ಹಣೆಯ ಮೇಲೆ ಬೆವರ ಹನಿಗಳಿದ್ದವು.

'ಫಸ್ಟ್ ಟೈಂ ಬರ್ತಿದೀಯಾ... ಏನು ವಿಷಯ? ನಿಮ್ಮ ಸ್ಕೂಲ್ ಫಂಕ್ಷನ್‌ಗೆ ಮೇಡಂನ ಗೆಸ್ಟ್ ಆಗಿ ಕರಿಯೋಕೆ ಬಂದಿದ್ದೀಯೇನು? ಅದೇನು ಒಬ್ಬಳೇ ಬಂದಿದೀಯಾ... ನಿನ್ನ ಫ್ರೆಂಡ್ಸ್ ಬರಲಿಲ್ಲವಾ? ಏನೂ ಹೆದರ್ಕೋ ಬೇಡಾ... ನಂಗೂ ನಿನ್ನ ವಯಸ್ಸಿನ ಮಗಳಿದಾಳೆ...' ವನಿತಾ